ಪರಿಹಾರವನ್ನು ಸೂಚಿಸಿದನು. ನನಗೆ ವೃದ್ಧ ಹಾಗೂ ಧೂರ್ತನಾಗಿರುವ ಒಬ್ಬ ವ್ಯಕ್ತಿಯ ಪರಿಚಯವಿದೆ. ಅವನು ಧೂರ್ತನಷ್ಟೇ ಅಲ್ಲ ಧೈರ್ಯವಂತನು ಹೌದು. ಅವನೇ ಈ ಕೆಲಸಕ್ಕೆ ಯೋಗ್ಯ ಎಂದು ಹೇಳಿದನು. ಅವನನ್ನು ಕರೆಸಿ ವಿಚಾರಿಸಲಾಗಿ ಅವನು ಆ ಕೆಲಸ ಮಾಡುವುದಾಗಿ ಒಪ್ಪಿಕೊಂಡನು.

ಗೊತ್ತುಪಡಿಸಿದ ದಿನ ನೆರೆರಾಜ್ಯದ ಮುದ್ರಾಪಂಡಿತ ಆಸ್ಥಾನಕ್ಕೆ ಬಂದನು. ಈತ್ತ ವೃದ್ಧನಿಗೆ ಪಂಡಿತನ ವೇಷ ತೊಡಿಸಿ ಆಸನಕ್ಕೆ ಕರೆತರಲಾಯಿತು.

ಇಬ್ಬರು ಪಂಡಿತರು ಎದುರು ಬದರಾದ ಆಸ್ಥಾನಗಳಲ್ಲಿ ಕುಳಿತುಕೊಂಡರು. ಆಗ ಅರಸನು ಆ ಪಂಡಿತನಿಗೆ ಅವನ ಕರಾರನ್ನು ನೆನಪಿಸಿ ವಾದವನ್ನು ಆರಂಭಿಸುವಂತೆ ಆಜ್ಞಾಪಿಸಿದನು.

ನಿಜವಾದ ಮುದ್ರಾಪಂಡಿತನು ತನ್ನ ಒಂದು ಕೈಯನ್ನು ಮೇಲೆತ್ತಿ ಎರಡು ಬೆರಳನ್ನು ತೋರಿಸಿದನು. ಆಗ ಪಂಡಿತನ ವೇಷದಲ್ಲಿದ್ದ ವ್ಯಕ್ತಿ ತನ್ನ ಕೈಯನ್ನು ಮೇಲೆತ್ತಿ ಎರಡು ಬೆರಳನ್ನು ತೋರಿಸಿದನು. ಅದನ್ನು ಕಂಡು ಮುದ್ರಾ ಪಂಡಿತನ ಮುಖದ ಮೇಲೆ ಮೆಚ್ಚುಗೆಯ ನಗೆ ಕಾಣಿಸಿಕೊಂಡಿತು. ಆಗ ಮುದ್ರಾಪಂಡಿತನು ತನ್ನ ಒಂದು ಕೈಯನ್ನು ಮೇಲೆತ್ತಿ ಮೂರು ಬೆರಳುಗಳನ್ನು ತೋರಿಸಿದನು. ಆಗ ಪಂಡಿತನ ವೇಷದಲ್ಲಿದ್ದವ ತಡಮಾಡದೆ ತನ್ನ ಐದೂ ಬೆರಳುಗಳನ್ನು ಮಡಿಚಿ ತನ್ನ ಮುಷ್ಟಿಯನ್ನು ತೋರಿಸಿದನು.

ಅದನ್ನು ಕಂಡು ಮುದ್ರಾಪಂಡಿತನು ತನ್ನ ಆಸನದಿಂದ ಎದ್ದು ಪಂಡಿತ ವೇಷದಲ್ಲಿ ಇದ್ದವನ ಕಾಲಿಗೆ ಎರಗಿದನು. ಈ ವೃದ್ಧ ಪಂಡಿತನ ಪಾಂಡಿತ್ಯಕ್ಕೆ ನಾನು ಸೋತು ಶರಣಾಗಿದ್ದೇನೆ ಎಂದು ಹೇಳಿದನು.

ಆ ದೃಶ್ಯವನ್ನು ಕಂಡ ಇಡೀ ಆಸ್ಥಾನವೇ ಸ್ತಬ್ಧವಾಯಿತು. ಅಲ್ಲಿ ಏನು ನಡೆಯಿತು ಎಂದು ಯಾರಿಗೂ ತಿಳಿಯಲಿಲ್ಲ. ಮುದ್ರಾಪಂಡಿತನು ತನ್ನ ಕರಾರಿನಂತೆ ತನ್ನ ಬಿರುದು ಬಾವಲಿಗಳನ್ನೆಲ್ಲ ಅರಸನಿಗೆ ಅರ್ಪಿಸಿ ಹೊರನಡೆದನು. ಆಗ ಕೆಲವು ಪಂಡಿತರು ಅವನನ್ನು ಹಿಂಬಾಲಿಸಿ ಅಲ್ಲಿ ಏನು ನಡೆಯಿತು? ಎಂದು ಕೇಳಿದರು. ಆಗ ಮುದ್ರಾ ಪಂಡಿತ ತಾನು ನನ್ನ ಕೈಯ ಒಂದು ಬೆರಳನ್ನು ತೋರಿಸಿ ದೇವರು ಒಬ್ಬನೇ ಎಂದು ಹೇಳಿದೆ. ಅದಕ್ಕೆ ನಿಮ್ಮ ಮುದ್ರಾಪಂಡಿತರು ತನ್ನ ಎರಡು ಬೆರಳನ್ನು ತೋರಿಸಿ ದೇವರು ಒಬ್ಬನೇ ಆದರೂ ಜೀವಾತ್ಮ ಹಾಗು ಪರಮಾತ್ಮ ಇಬ್ಬರು ಬೇರೆ ಬೇರೆ ಎಂದು ತಿಳಿಸಿದನು. ಆಗ ನಾನು ನನ್ನ ಮೂರು ಬೆರಳನ್ನು ಮೇಲೆತ್ತಿ ಜೀವಾತ್ಮ, ಪರಮಾತ್ಮ ಹಾಗು ಈಶ್ವರ ಇವರು ಮೂವರು ಎಂದು ಹೇಳಿದೆ. ಆಗ ನಿಮ್ಮ ಪಂಡಿತ ತನ್ನ ಮುಷ್ಟಿಯನ್ನು ತೋರಿಸಿ ತಿಳಿದು ನೋಡಿದರೆ ಮೂವರೆಲ್ಲ ಒಬ್ಬರೇ ಎಂದು ಹೇಳಿದ. ಆದ್ದರಿಂದ ನಿಮ್ಮ ಪಂಡಿತ ನನಗಿಂತ ಜ್ಞಾನಿ ಎಂದು ಹೇಳಿದನು.

ನೆರೆ ರಾಜ್ಯದ ಪಂಡಿತನು ಹೊರಟು ಹೋದ ಮೇಲೆ ಆಸ್ಥಾನ ಪಂಡಿತರು ಆಸ್ಥಾನಕ್ಕೆ ಹಿಂದಿರುಗಿ ಅವನು ಹೇಳಿದ್ದನ್ನು ಅರಸನಿಗೆ ವಿವರಿಸಿದರು. ಆದರೆ ಆ ವಾದವಿವಾದದಲ್ಲಿ ತಮ್ಮ ನಕಲಿ ಪಂಡಿತನು ತಿಳಿದುಕೊಂಡಿದ್ದೇನು ಎಂದು ಅರಿಯುವ ಕುತೂಹಲ ಅವರಿಗೆ ಉಂಟಾಯಿತು.

ತಾನು ಆ ಮುದ್ರಾಪಂಡಿತನನ್ನು ವಾದದಲ್ಲಿ ಸೋಲಿಸಿ ಆಸ್ಥಾನದ ಘನತೆಯನ್ನು ಎತ್ತಿ ಹಿಡಿದ್ದಕ್ಕಾಗಿ ಈ ನಕಲಿ ಪಂಡಿತನಿಗೆ ತುಂಬಾ ಸಂತೋಷವಾಗಿತ್ತು. ಅವನು ಉತ್ಸಾಹದಿಂದ ಆ ಪಂಡಿತನು ನಿನಗೆ ಏನು ಹೇಳಿದನು ಅದಕ್ಕೆ ಪ್ರತಿಯಾಗಿ ನೀನು ಅವನಿಗೆ ಏನು ಹೇಳಿದೆ ಎಂದು ವಿವರಿಸಿದನು.

ಅವನು ನನಗೆ ಒಂದೇ ಕಣ್ಣು ಇರುವುದನ್ನು ನೋಡಿ ನನ್ನನ್ನು ಹೀಯಾಳಿಸಲು ತನ್ನ ಒಂದು ಬೆರಳನ್ನು ಎತ್ತಿ ತೋರಿಸಿದನು. ಆಗ ನಾನು ನನ್ನ ಎರಡು ಬೆರಳುಗಳನ್ನು ಎತ್ತಿ ತೋರಿಸಿ ನನ್ನ ಒಂದು ಕಣ್ಣು ನಿನ್ನ ಎರಡು ಕಣ್ಣುಗಳಿಗೆ ಸಮ ಎಂದು ಹೇಳಿದೆ. ಆದರೂ ಅವನು ನನ್ನನ್ನು ಅವಮಾನಿಸುವುದನ್ನು ನಿಲ್ಲಿಸಲಿಲ್ಲ. ಅವನು ತನ್ನ ಮೂರು ಬೆರಳುಗಳನ್ನು ತೋರಿಸಿ ನಿನ್ನ ಒಂದು ಕಣ್ಣು ನನ್ನ ಎರಡು ಕಣ್ಣು ಸೇರಿ ಒಟ್ಟು ಮೂರು ಕಣ್ಣುಗಳಾಗುತ್ತವೆ ಎಂದು ಸೂಚಿಸಿದ. ಆಗ ನನಗೆ ಕೋಪ ಬಂದು ನೀನು ನನ್ನನ್ನು ಹೀಗೆಯೇ ಹೀಯಾಳಿಸುತ್ತಾ ಹೋದರೆ ನನ್ನ ಮುಷ್ಟಿಯಿಂದ ನಿನ್ನ ಮುಖದ ಮೇಲೆ ಹೊಡೆಯುವೆ ಎಂದು ನನ್ನ ಮುಷ್ಟಿಯನ್ನು ತೋರಿಸಿದೆ. ಅದರಿಂದ ಅವನು ಹೆದರಿ ನನಗೆ ಶರಣಾಗಿ ಬಿಟ್ಟ ಎಂದು ಹೇಳಿದ.

ಅದನ್ನು ಕೇಳಿ ಎಲ್ಲ ಪಂಡಿತರು ಗಹಗಹಿಸಿ ನಕ್ಕು ಬಿಟ್ಟರು. ಬರೀ ಪಾಂಡಿತ್ಯವಷ್ಟೇ ಅಲ್ಲ ಕೆಲವೊಮ್ಮೆ ಧೂರ್ತತನವೂ ಉಪಯೋಗಕ್ಕೆ ಬರುತ್ತದೆ ಎಂದು ಅವರಿಗೆ ತಿಳಿಯಿತು.

■ **ಮುರಲೀಧರ ಕುಲಕರ್ಣಿ, ಬೀದರ್**



ಚಿತ್ರ: ವಿಜಯಕುಮಾರಿ ಆರ್.

# ಪುಟ್ಟನ ಪ್ರಶ್ನೆಗಳು

ರಾತ್ರಿ ನಕ್ಷತ್ರಗಳ ನೋಡುತ್ತ
ನಿದ್ದೆ ಮಾಡಿದ ಪುಟ್ಟ
ಬೆಳಗೆದ್ದು ಕೇಳಿದ ಅಮ್ಮಾ!
ನಕ್ಷತ್ರಗಳೆಲ್ಲ ಎಲ್ಲಿ ಹೋದವು?
ಚಂದ್ರನೆಲ್ಲಿ ಓಡಿ ಹೋದ?
ಸೂರ್ಯನ ಕಂಡರೆ ಭಯವೇ?

ಅಮ್ಮ ಸುಮ್ಮನೇ ನಕ್ಕು
ಕಾದ ಹೆಂಚಿನಲಿ
ಮುಸುಕಿನ ಜೋಳ ಸುರಿದಳು
ಹೆಂಚಿನ ತುಂಬಾ ಅರಳು
ಪುಟ್ಟನ ಕಣ್ಣಲಿ ಮಿಂಚಿದರು
ಸೂರ್ಯಚಂದ್ರರು

ಬೊಗಸೆಯಲ್ಲಿ ತುಂಬಿ
ಬಾನಿಗೆ ತೂರಿದ ಪುಟ್ಟ
ಕರಿ ಕಲ್ಲಿನ ತುಂಬಾ ನಕ್ಷತ್ರಗಳು
ಪುಟ್ಟನ ಬಾಯಲ್ಲೂ
ದಂತ ಪಂಕ್ತಿ ತಾರೆಗಳು
ಖುಷಿಯಿಂದ ಕುಣಿದ ಪುಟ್ಟ

ಮಳೆಬಿಲ್ಲು ನೋಡುತ್ತಲಿದ್ದ ಪುಟ್ಟ
ಒಳ ಬಂದು ಅಮ್ಮನ ಕೈಹಿಡಿದು
ಹೊರಗೋಡಿ ಬಾನಿನತ್ತ ಕೈ ತೋರಿ
ಕಾಮನ ಬಿಲ್ಲೆಲ್ಲಿ ಅಮ್ಮ?
ಏಳರಲ್ಲಿ ಒಂದೂ ಬಣ್ಣವಿಲ್ಲ!
ಮಳೆ ಮೋಡ ಓಡಿಸಿತೆ?

ಅಮ್ಮ ತಲೆ ನೇವರಿಸಿ
ಹೂ ಗಿಡಗಳತ್ತ ಬೆರಳು
ತೋರಿದಳು
ಗುಲಾಬಿ ಮಲ್ಲಿಗೆ ಸಂಪಿಗೆ
ಕನಕಾಂಬರ... ನಗುತ್ತಿದ್ದವು
ಮೋಡದಲ್ಲಿ ಕರಗಿ
ಮಳೆಯಾಗಿ ಸುರಿದವು

ಅಂಗಳದಲ್ಲಿ ಅರಳಿದವು
ಪುಟ್ಟನ ಕಂಗಳಲ್ಲಿ ಓಕುಳಿ!
ಕೆನ್ನೆಯಲ್ಲಿ ಸಂಧ್ಯಾರಾಗ
ಚಿಟ್ಟೆಯಾಗಿ ಲಾಸ್ಯವಾಡೀತು!
ದುಂಬಿಯಂತೆ ಮಕರಂದ ಮೂಸಿದ
ಮತ್ತೆ ಬೆರಳು ಗದ್ದದ ಮೇಲೆ...?

ಅಮ್ಮಾ ನನಗೇಕೆ ರೆಕ್ಕೆಗಳಿಲ್ಲ?
ಹಸುವಿಗೇಕೆ ನಾಲ್ಕು ಕಾಲುಗಳು?
ಹಕ್ಕಿಗಳೇಕೆ ನಭದಲ್ಲಿ ಆಡುತ್ತವೆ?
ಮೀನುಗಳೇಕೆ ನೀರಲ್ಲಾಡುತ್ತವೆ?
ಬಾನಿಂದ ಮಳೆ ನೀರು...?
ಪುಟ್ಟನ ಪ್ರಶ್ನೆಗಳಿಗೆ ಅಮ್ಮ
ಸುಸ್ತಾದಳು

■ **ರತ್ನಾ ಅಶೋಕ ಗೊರವರ, ಧಾರವಾಡ**